# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

ಸಿಸಿ ನಂ. 64/2018

ಚಾಸಾ-03 ಪ್ರಾಸಾ-02

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ ಪಡೆದುಕೊಳ್ಳಲಾಯಿತು.
ದಿನಾಂಕ: 22-05-2026

| | |
|---|---|
| ಹೆಸರು | : ಜಾಫರಮಿಯಾ |
| ತಂದೆಯ ಹೆಸರು | : ಹಾಜಿಪಟೇಲ |
| ವಯಸ್ಸು | : 64 ವರ್ಷ |
| ಉದ್ಯೋಗ | : ನಿವೃತ್ತ ಅಬಕಾರಿ ನಿರೀಕ್ಷಕರು |
| ವಾಸಸ್ಥಳ | : ಚಿಂಚೋಳಿ |

ದಿಃ **22-05-2026** ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಲಾಯಿತು.

ದಂಡ ಪ್ರಕ್ರಿಯಾ ಸಂಹಿತೆ ಕಲಂ.**299** ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆಃ

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ

ಸೆಪ್ಟೆಂಬರ 2009 ರಿಂದ ಜನವರಿ 2010 ರವರೆಗೆ ಅಬಕಾರಿ ಉಪನಿರೀಕ್ಷಕರು DCEIB ಎಂದು ಕಲಬುರಗಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 12-11-2009 ರಂದು ನಾನು ಚಾಸಾ 4 ರಿಂದ 6 ರವರು ಸೇರಿಕೊಂಡು ಇಲಾಖಾ ವಾಹನ ಸಂಃ KA 32 G 522 ನೇದರಲ್ಲಿ ಚಾಸಾ 1, 2 ರವರನ್ನು ಕರೆದುಕೊಂಡು ಚಿಕ್ಕಕಗಬ್ಬೂರು ಹತ್ತಿರ ರಸ್ತೆ ಗಸ್ತು ಮಾಡುತ್ತಿದ್ದಾಗ 4-30 ಗಂಟೆಗೆ ಒಂದು ಟಾಟಾ ಸುಮೋ ವಾಹನ ಸಂಃ AP 21 E 9954 ವಾಹನವನ್ನು ಸಿಬ್ಬಂದಿ ಸಹಾಯದಿಂದ ತಡೆದು ನಿಲ್ಲಿಸಿ ಸ್ಥಳದಲ್ಲಿ ಶೋದನಾ ಸಮುಚ್ಚಿತ್ತ ತಯಾರಿಸಿ ಸದರಿ ವಾಹನವನ್ನು ತಪಾಸಣೆ ಮಾಡಿ ನೋಡಿದಾಗ ಸದರಿ ವಾಹನದಲ್ಲಿ ಒಟ್ಟು 32 ಪ್ಲಾಸ್ಟಿಕ ಬ್ಯಾಗಗಳು ಇದ್ದು, ಅವುಗಳಲ್ಲಿ ನಕಲಿ ಸಾರಾಯಿ ಪ್ಯಾಕೆಟುಗಳು ಇದ್ದು ಪ್ರತಿಯೊಂದಲ್ಲಿ ಪ್ಲಾಸ್ಟಿಕ ಬ್ಯಾಗನಲ್ಲಿ 310 ರಂತೆ ಒಟ್ಟು 9920 ಪ್ಯಾಕೆಟುಗಳು ದೊರೆತಿರುತ್ತವೆ. ಸದರಿ ವಾಹನ ಚಾಲಕನನ್ನು ವಿಚಾರಿಸಲಾಗಿ ಅವನ ಹೆಸರು ಬಾಲಚಂದ್ರ

ಎಂದು ಮತ್ತು ಇನ್ನೊಬ್ಬ ವ್ಯಕ್ತಿ ಹೆಸರು ಇ. ಆಂಜನೆಯಲು ಎಂದು ತಿಳಿಸಿರುತ್ತಾರೆ. ಸದರಿ ವ್ಯಕ್ತಿಗಳು ತೆಲುಗು ಭಾಷಿಕರಾಗಿದ್ದು ಅವರಿಗೆ ಹಿಂದಿ ಭಾಷಯಲ್ಲಿ ವಿಚಾರಿಸಿದಾಗ ಅವರುಗಳು ಸದರಿ ಸಾರಾಯಿ ಪ್ಯಾಕೆಟುಗಳನ್ನು ಮಹಾರಾಷ್ಟ್ರದಿಂದ ತಂದಿರುವುದಾಗಿ ತಿಳಿಸಿರುತ್ತಾರೆ. ಈ ಕುರಿತು ನಾವು ಪರವಾನಿಗೆ ವಿಚಾರಿಸಿದಾಗ ಸದರಿಯವರು ಯಾವುದೇ ಪರವಾನಿಗೆ ಇಲ್ಲ, ಊರಲ್ಲಿ ಜಾತ್ರೆ ನಿಮಿತ್ತ ಕಳ್ಳಸಂತೆಯಲ್ಲಿ ಖರೀದಿಸಿ ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿರುತ್ತಾರೆ. ದೊರೆತ ಸಾರಾಯಿ ಪ್ಯಾಕೆಟುಗಳು ಕರ್ನಾಟಕ ಸರ್ಕಾರದಿಂದ ನಿರ್ಬಂದಿಸಲಾಗಿದೆ ಎಂದು ತಿಳಿಸಿ ಅವುಗಳನ್ನು ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡಿರುತ್ತೇವೆ.

ಪ್ರತಿಯೊಂದು ಪ್ಲಾಸ್ಟಿಕ ಚೀಲಗಳಿಂದ ತಲಾ 2 ರಂತೆ ಪ್ಯಾಕೆಟುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ಅಂತ ತೆಗೆದು, ಅವುಗಳ ಮೇಲೆ ನಾವು ಮತ್ತು ಪಂಚರ ಸಹಿ ಮಾಡಿದ ಚೀಟಿಗಳನ್ನು ಅಂಟಿಸಲಾಯಿತು ಮತ್ತು ಇಲಾಖಾ  ಮುದ್ರಾ ಸಂಖ್ಯೆ 420 ಅನ್ನು ಒತ್ತಲಾಯಿತು. ನಂತರ ಜಪ್ತಿ ಪಂಚನಾಮೆಯನ್ನು 4-20 ರಿಂದ 5-30 ರವರೆಗೆ ಪಂಚರ ಸಮಕ್ಷಮ ಬರೆದು ಓದಿ ಹೇಳಿ ಸಹಿ ಪಡೆಯಲಾಯಿತು. ಮಾದರಿ ಮುದ್ರೆ ತಯಾರಿಸಲಾಯಿತು. ನಂತರ ದೊರೆತ ಮುದ್ದೆಮಾಲುಗಳೊಂದಿಗೆ ಆರೋಪಿತರಿಗೆ ಬಂಧಿಸಿ ಕಚೇರಿಗೆ ಬಂದು ಆರೋಪಿತರ ವಿರುದ್ದ ಗುನ್ನೆ ಸಂಃ 7/2009 ನ್ನು ದಾಖಲಿಸಿ ಮುಂದಿನ ಕ್ರಮಕ್ಕಾಗಿ ಆರೋಪಿತರನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ ಜಪ್ತಿಪಡಿಸಿಕೊಂಡ ಮುದ್ದೆಮಾಲಿನ PF ಅನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಚಾಸಾ 4, 6 ರವರ ಹೇಳಿಕೆಯನ್ನು ಅದೇ ದಿನ ಪಡೆದುಕೊಂಡಿರುತ್ತೇನೆ. ದಿಃ 18-12-2009 ರಂದು ಚಾಸಾ 5 ರವರಿಗೆ ಮುದ್ದೆಮಾಲು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು ಹೋಗಲು ನೇಮಿಸಿರುತ್ತೇನೆ. ಅದೇ ದಿನ ಆರೋಪಿತರ ಸ್ವಖುಷಿ ಹೇಳಿಕೆ ಪಡೆದಿರುತ್ತೇನೆ. ಮುಂದಿನ ತನಿಖೆಗಾಗಿ ಚಾಸಾ 4 ರವರಿಗೆ ಕಡತಗಳನ್ನು ನೀಡಿರುತೇನೆ.

ಸಾಕ್ಷಿಗೆ ಶೋದನಾ ಸಮುಚ್ಚಿತ ವರದಿಯನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದು ಅದನ್ನು ಈಗ ನಿಪಿ **1** ಎಂದು ಮತ್ತು ಸಾಕ್ಷಿ ಸಹಿಯನ್ನು ನಿಪಿ **1**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಜಪ್ತಿ ಪಂಚನಾಮೆಯ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-**2** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**2**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮಾದರಿ ಮುದ್ರೆ ಪ್ರತಿಯನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದು ಅದನ್ನು ಈಗ ನಿಪಿ-**3** ಎಂದು ಮತ್ತು ಸಾಕ್ಷಿ ಸಹಿಯನ್ನು ನಿಪಿ **3**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಪ್ರ.ವ.ವ. ಪ್ರತಿಯನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದು ಅದನ್ನು ಈಗ ನಿಪಿ-**4** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಆರೋಪಿತರ ಸ್ವಖುಷಿ ಹೇಳಿಕೆ ಪ್ರತಿಗಳನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದು ಅವುಗಳನ್ನು ಈಗ ನಿಪಿ-**5** ಮತ್ತು **6** ಎಂದು ಮತ್ತು ಸಾಕ್ಷಿ ಸಹಿಯನ್ನು ನಿಪಿ **5**(ಎ) ಮತ್ತು **6**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಕೋರಿಕೆ ಪತ್ರವನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-**7** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**7**(ಎ) ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ